# ಎದೆಗೂಡಿನಲ್ಲಿ ಪ್ರೀತಿಯ ದೀಪ ಹಚ್ಚೋಣ

– ಸುಷ್ಮಾ ಪವಾರ, ವಿಜಯಪುರ



ನೀನು ದೀಪ, ನಾನು ಹಾವಳಿ! ನಾವಿಬ್ಬರು ಸೇರಿದರೆ ದೀಪಾವಳಿ. ಎದೆಯಗೂಡಿನಲ್ಲಿ ಪ್ರೀತಿಯ ಬೆಳಕಿರುವ ತನಕ ದೀಪಾವಳಿ, ಅಲ್ಲಿ ನಮ್ಮದೇ ಪೇವುದ ಹಾವಳಿ; ದೀಪ ಆರದಂತೆ ಬೆಂಗಾವಲು ನನಗೆ ನೀನು, ನಿನಗೆ ನಾನು. ಓಗೇ ಮನುಷ್ಯ ಪ್ರೇಮಕ್ಕಾಗಿ, ಕೇವಲ ಮನುಷ್ಯ ಪ್ರೀತಿಗಾಗಿ ಹಂಬಲಿಸುವ ಜೀವನದ ವ್ಯಾಮೋಹಿ. ಬಡ ಕವಿಯೊಬ್ಬ ತನ್ನ ಗುಡಿಸಲಲ್ಲಿ ಏಕಾಂಗಿಯಾಗಿ ಕುಳಿತು, ಅಮವಾಸ್ಯೆಯ ರಾತ್ರಿಯಲ್ಲಿ ದೀಪಾವಳಿಯನ್ನು ಕನವರಿಸಿ ಕವಿತೆ ಬರೆಯುತ್ತಾನೆ ನಿಮಗಾಗಿ, ನಮಗಾಗಿ. ಇಂತಹ ದೀಪಾವಳಿ ನಮ್ಮ ಭಾರತದಲ್ಲಿ ಸಾಂಪ್ರಾದಾಯಕವಾಗಿ ಪಂಚಾಗ ಚಂದ್ರಮಾನವನ್ನು ಅವಲಂಬಿಸಿದೆ. ಅಂದರೆ ಅಶ್ವಯುಜ ಮಾಸ ಕೃಷ್ಣಪಕ್ಷದ ಚತುರ್ದಶಿ, ಅಮವಾಸ್ಯೆ ಹಾಗೂ ಕಾರ್ತಿಕ ಮಾಸ ಶುಕ್ಲಪಕ್ಷದ ಪಾಡ್ಯ ಈ ದಿನಗಳಲ್ಲಿ ದೀಪಾವಳಿಯನ್ನು ಆಚರಿಸಲಾಗುತ್ತದೆ. ಕೇವಲ ಹಿಂದೂ ಧರ್ಮವಲ್ಲದೇ ಸಿಖ್ ಧರ್ಮದಲ್ಲಿಯೂ ಕೂಡ 1620 ರಲ್ಲಿ ಸಿಖ್ಖರ ಆರನೇಯ ಗುರು ಹರಗೋಬಿಂದ್ ಸಿಂಗ್ ಗ್ವಾಲಿಯರ್ ಕೋಟೆಯಲ್ಲಿ ಬಂಧಿತರಾಗಿದ್ದ 52 ರಾಜರನ್ನು ಬಿಡಿಸಿ ತಂದ ದಿನವೆಂದು ಈ ಕಾಲವನ್ನು ಆಚರಿಸಲಾಗುತ್ತದೆ. ಇನ್ನು ಜೈನ ಧರ್ಮದಲ್ಲಿ ದೀಪಾವಳಿಯನ್ನು ಕಾರ್ತಿಕ ಮಾಸದಲ್ಲಿ ಆಚರಿಸುತ್ತಾರೆ.

ಹಿಂದೂ ಧರ್ಮದಲ್ಲಿ ದೀಪ ಒಂದು ಮಹತ್ವವುಳ್ಳ ವಿಷಯ, ಯಾಕೆಂದರೆ ಅದು ಪವಿತ್ರತೆಯ, ಒಳ್ಳೆಯತನದ ಮತ್ತು ಶಕ್ತಿಯ ಸಂಕೇತವಾಗಿದೆ. ವ್ಯಕ್ತಿಯ ಆಂತರಿಕ ಆಧ್ಯಾತ್ಮಿಕ ಬೆಳಕು ಹೊರಗು ಸೂಚಿಸಬೇಕೆಂಬ ಸಂದೇಶವನ್ನು ಸಾರಲು ಪ್ರತಿ ಮನೆಯ ಬಾಗಿಲ ಹೊರಗೆ ದೀಪಗಳನ್ನು ಬೆಳಗುತ್ತಾರೆ.

ಹಿನ್ನಲೆ: ನರಕಾಸುರನು ಸಾಮಾನ್ಯವಾಗಿ ಇತರ ಎಲ್ಲಾ ರಾಕ್ಷಸರು ಇರುವಂತೆ ಒಬ್ಬ ಚಾಣಾಕ್ಷನಾದ ರಾಕ್ಷಸನಾಗಿದ್ದನು. ಅಜೇಯನಾಬೇಕೆನ್ನುವ ಉದ್ದೇಶದಿಂದ ಸೃಷ್ಟಿಕರ್ತನಾದ ಬ್ರಹ್ಮದೇವನಿಂದ ನರಕಾಸುರ ಅಮರತ್ವದ ವರವನ್ನು ಪಡೆಯುತ್ತಾನೆ. ತಾಯಿಯಿಂದಲೇ ತನಗೆ ಸಾವು ಬರುವಂತಾಗಲಿ ಎಂದು ನರಕಾಸುರ ವರವನ್ನು ಚಾಣಾಕ್ಷತನದಿಂದ ಬೇಡುತ್ತಾನೆ. ಭೂಮಂಡಲದ ಮೇಲೆ ದಾಳಿ ಮಾಡಿ ತದನಂತರ ದೇವಲೋಕದ ಮೇಲೆ ದಾಳಿ ಮಾಡುತ್ತಾನೆ. ನಂತರ ಇಂದ್ರನ ಅರಮನೆಯಲ್ಲಿದ್ದ 16,000 ಸ್ತ್ರೀಯರನ್ನು ಸೆರೆಹಿಡಿದು ಕರೆದೊಯ್ಯುತ್ತಾನೆ. ಮತ್ತು ತೆರಳುತ್ತಿರುವಾಗ ತಾಯಿ ದೇವತೆಯ ಅದಿತಿಯ ಕಿವಿಗಳನ್ನಲಂಕರಿಸಿದ ಹೊಳೆಯುವ ಕರ್ಣಾಭರಣ ನರಕಾಸುರನ ಕಣ್ಣಿಗೆ ಬೀಳುತ್ತವೆ. ಅದನ್ನು ಕತ್ತರಿಸಿಕೊಂಡ ಹೋದ ನಂತರ ಅದಿತಿಯು ಕೃಷ್ಣನ ಬಳಿಗೆ ಬಂದಾಗ ಕೃಷ್ಣನು ಸತ್ಯಭಾಮೆಯ ಬಳಿ ತೆರಳುತ್ತಾನೆ. ಕೃಷ್ಣನು ಮಡದಿಯ ಬಳಿ ತಿರುಗಿ ನನ್ನೊಡನೆ ತೆರಳಲು ಸಿದ್ಧಳಾಗು. ನಿನ್ನೆಲ್ಲಾ ಆಯುಧಗಳನ್ನು ತೆಗೆದುಕೊ ಹಾಗೂ ಗರುಡನೂ ಕೂಡ ಜೊತೆಗೆ ಕರೆದೊಯ್ಯುವಂತೆ ಆದೇಶಿಸುತ್ತಾನೆ.



ನರಕಾಸುರನು ಕೃಷ್ಣನತ್ತ ಕಣ್ಣು ಕೋರೈಸುವ ಸಿಡಿಲಿನಂತಹ ಆಯುಧವನ್ನು ಎಸೆಯಲು, ಗರುಡನು ಚಾಕಚಕ್ಯತೆ ಹಾಗೂ ಸಮಯಪ್ರಜ್ಞೆಯಿಂದ ಅಧೋಮುಖವಾಗಿ ಚಲಿಸಿದಾಗ, ಆ ಅಸ್ತ್ರವು ಗುರಿ ತಪ್ಪಿದಾಗ ಕೃಷ್ಣನು ಪಾರಾಗುತ್ತಾನೆ. ನರಕಾಸುರ ತನ್ನ ಪ್ರಬಲ ಅಸ್ತ್ರವಾದ ತ್ರಿಶೂಲವನ್ನು ಕೃಷ್ಣನತ್ತ ಎಸೆಯುತ್ತಾನೆ. ಅದು ಬಡಿದಾಗ ಮೂರ್ಛೆ ತಪ್ಪಿ ಬೀಳುತ್ತಾನೆ. ಈ ಘಟನೆಯಿಂದ ಸತ್ಯಭಾಮೆ ನರಕಾಸುರನತ್ತ ಬಾಣ ಪ್ರಯೋಗ ಮಾಡುತ್ತಾಳೆ. ಅದು ಸರಿಯಾಗಿ ನರಕಾಸುರನ ತಲೆಯನ್ನು ಸೀಳಿ ಅಸುರನು ಮೃತನಾಗುತ್ತಾನೆ.

ಉದ್ವಿಗ್ನಗೊಂಡ ಸತ್ಯಭಾಮೆಯ ಮೂರ್ಛೆ ತಪ್ಪಿದ ಭಗವಂತನತ್ತ ತಿರುಗಿ ನೋಡಲು ಕೃಷ್ಣನು ತುಂಟ ನಗೆಯನ್ನು ಬೀರುತ್ತಾ ಎದ್ದು ನಿಲ್ಲುತ್ತಾನೆ. ಹದಿನಾರು ಸ್ತ್ರೀಯರು ಕೃಷ್ಣನ ಅನುಗ್ರಹದಿಂದ ಬಿಡುಗಡೆಗೊಳ್ಳುತ್ತಾರೆ. ಈ ದುಷ್ಟ ಶಕ್ತಿಯ ಸಂಹಾರಕ್ಕಾಗಿ ದೀಪಾವಳಿ ಹಬ್ಬವನ್ನು ಆಚರಿಸುತ್ತೇವೆ. ಎಣ್ಣೆ ಸ್ನಾನ ಏಕೆಂದರೆ ನರಕಾಸು ವದರೊಳಗೆ ಕೃಷ್ಣ ಹಾಗೂ ಸತ್ಯಭಾಮೆಯರು ಯುದ್ಧ ಭೂಮಿಯಿಂದ ಮರಳಿ ಬಂದಾಗ ಅವರ ಶರೀರಗಳೆಲ್ಲಾ ರಕ್ತ ಹಾಗೂ ಧೂಳಿನಿಂದ ಹೊಲಸಾಗಿದ್ದು, ಅವುಗಳನ್ನು ಶ್ರೀಗಂಧ, ಮಾರ್ಜಕಗಳಿಂದ ಮತ್ತು ಪರಿಮಳಯುಕ್ತ ಎಣ್ಣೆಯನ್ನು ಬಳಸಿಕೊಂಡು ಸ್ವಚ್ಛಗೊಳಿಸುವುದು ಅವಶ್ಯವಾಗಿತ್ತು. ಈ ಕಾರಣಕ್ಕೆ ಎಣ್ಣೆ ಸ್ನಾನವನ್ನು ಮಾಡಿಕೊಂಡ ನಂತರವೇ ದೀಪದ ಹಬ್ಬವನ್ನು ಆಚರಿಸುತ್ತೇವೆ ಎಂದು ಪುರಾಣಗಳು ಹೇಳುತ್ತವೆ. ಬಾಳೆ ಎಲೆ, ಕುಂಬಳಕಾಯಿ, ಚೆಂಡು ಹೂವು, ಮಾವಿನ ಎಲೆಗಳು ದೀಪಾವಳಿಗೆ ಪರಿಸರದ ಕಳೆಯನ್ನು ನೀಡುತ್ತವೆ. ಪಟಾಕಿ ಮದ್ದಿನ ಘಾಟು ವಾಸನೆಯನ್ನು ನಿರ್ಮೂಲನೆ ಮಾಡುವ ಈ ಹಸಿರು ತೋರಣಗಳು ವಾತಾವರಣದಲ್ಲಿ ಹೊಸ ಗಾಳಿಯನ್ನು ಹರಡುತ್ತವೆ. ದೀಪಾವಳಿ ಎಂದರೆ ಕೇವಲ ದೀಪ ಹಚ್ಚುವ ಹಬ್ಬವಲ್ಲ. ಅದು ಪ್ರೀತಿಯಿಂದ ಮನುಷ್ಯತ್ವದ ಆಕ್ರೋಶವನ್ನು ನಿವಾರಿಸುವುದು. ಕತ್ತಲೆಯು ಕೂಡ ಬೆಳಕಿನ ಸಂಗಮದಲ್ಲಿ ಒಂದಾಗಿ ಜ್ಞಾನದ ಬೆಳಕಾಗಿ ಮನುಷ್ಯರ ಹೃದಯವನ್ನು ಶುಚಿಗೊಳಿಸುವ ಹಬ್ಬವಾಗಿದೆ. ದೀಪ ಮನಸ್ಸನ್ನು ತೊಳೆಯಲು ದೀಪಾವಳಿ ಬರುತ್ತದೆ. ದೀಪ ಹಚ್ಚಿ ಎದೆಗೂಡಿನೊಳಗೆ ಪ್ರೀತಿಯ ಬೆಳಕು ಹರಡುತ್ತಾ ನೋವು ಮರೆತು ನಲಿವಿನಿಂದ ಬೆರೆತು ಒಂದಾಗಿ ಬಾಳುವ ಹಬ್ಬವೇ ದೀಪಾವಳಿ.



Scanned with CamScanner